ದಿನಾಂಕಃ 06.03.2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಲಾಯಿತು.

ಪಾಟೀಸವಾಲುಃ ಶ್ರೀ.ಜೆ ಎಸ್ ವಕೀಲರಿಂದ ಒಂದನೇ ಎದುರುದಾರರ ಪರವಾಗಿ.

ನಾನು ಅರ್ಜಿದಾರರಿಗೆ ವೈಯಕ್ತಿಕವಾಗಿ ಚಿಕಿತ್ಸೆ ಕೊಟ್ಟಿರುವುದಿಲ್ಲ. ಗಾಯಾಳು ಕೇವಲ ನ್ಯೂನತೆ ಪ್ರಮಾಣ ನಿರ್ಧರಿಸುವ ಸಲುವಾಗಿ ನನ್ನ ಹತ್ತಿರ ಪರೀಕ್ಷೆಗೆ ಬಂದಿರುತ್ತಾರೆ ಎಂದರೆ ಸರಿ. ನ್ಯೂನತೆಯ ಪ್ರಮಾಣವನ್ನು ನಿರ್ಧರಿಸುವ ಸಮಯದಲ್ಲಿ ಹಿಂದಿನ ಆಸ್ಪತೆರಯ ದಾಖಲೆಗಳನ್ನು ನೋಡಿರುವುದಿಲ್ಲ. ಅರ್ಜಿದಾರರಿಗೆ ಚಿಕಿತ್ಸೆ ಕೊಟ್ಟಂತಹ ವೈದ್ಯರೊಂದಿಗೆ ಚರ್ಚಿಸಿರುವುದಿಲ್ಲ. ಅರ್ಜಿದಾರರಿಗೆ ಆಗಿದ್ದಂತಹ ಮೂಳೆ ಮುರಿತವು ಕೂಡಿಕೊಂಡಿರುತ್ತದೆ. ಅರ್ಜಿದಾರರು ಆಸ್ಪತ್ರೆಯಿಂದ ಬಿಡುಗಡೆ ಆದ ನಂತರ ನನ್ನ ಹತ್ತಿರ ಬರುವುದಕ್ಕಿಂತ ಪೂರ್ವದಲ್ಲಿ ಮುಂದುವರೆದ ಚಿಕಿತ್ಸೆ ಪಡೆದುಕೊಂಡಿರುವ ಕುರಿತು ನನಗೆ ಗೊತ್ತಿರುವುದಿಲ್ಲ. ಅರ್ಜಿದಾರರಿಗೆ ಮುಂದುವರೆದ ಚಿಕಿತ್ಸೆ ಪಡೆದುಕೊಳ್ಳಲು ಸಲಹೆ ಕೊಟ್ಟಿರುತ್ತೇನೆ. ಆದರೆ ಆ ಕುರಿತು ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಅರ್ಜಿದಾರರ ಸೊಂಟದ ಚಲನವಲನವು ಸಹಜವಾಗಿರುತ್ತದೆ ಎಂದರೆ ಸರಿಯಲ್ಲ. ಅರ್ಜಿದಾರರ ಬಲಗಾಲಿನ ಮಂಡಿ ಮತ್ತು ಹಿಮ್ಮಡಿ ಸಹಜವಾಗಿರುತ್ತದೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಆಗಿದ್ದ ಮೂಳೆ ಮುರಿತವು ಕೂಡಿಕೊಂಡಿರುವುದರಿಂದ ಅರ್ಜಿದಾರರ ಚಲನವಲನದಲ್ಲಿ ಯಾವುದೇ ತೊಂದರೆಗಳು ಇರುವುದಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ನಾನು ಯಾವುದೇ ರೀತಿಯ ವೈದ್ಯಕೀಯ ಪರೀಕ್ಷೆ ಮಾಡದೇ ಅವರ ಶಕ್ತಿ ಸಾಮರ್ಥ್ಯದ ನ್ಯೂನತೆ ಇರುತ್ತದೆ ಎಂದು ಸುಳ್ಳು ಹೇಳಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಅರ್ಜಿದಾರರ ಎಡಗೈ ಭುಜ ಹಾಗೂ ಮೊಣಕೈ ಸಹಜವಾಗಿದ್ದು ಆದರೆ ಮಣಿಕಟ್ಟಿನಲ್ಲಿ ತೊಂದರೆ ಇರುತ್ತದೆ. ಅರ್ಜಿದಾರರಿಗೆ ಆಗಿದ್ದ ನ್ಯೂನತೆಯು ಶಾಶ್ವತ ಅಂಗನ್ಯೂನತೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರರ ಕೆಲಸದ ಕುರಿತಂತೆ ನಾನು ಯಾವುದೇ ನ್ಯೂನತೆ ನಿರ್ಧರಿಸಿರುವುದಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರರ ಜೋಡಿಸಲಾಗಿದ್ದ ಒಳಜೋಡಣೆಗಳನ್ನು ತೆಗೆದ ನಂತರ ಅವರ ದೈಹಿಕ ನ್ಯೂನತೆ ಪ್ರಮಾಣವು ಕಡಿಮೆ ಆಗುತತದೆ ಎಂದರೆ ಸರಿಯಲ್ಲ. ಮುಂದುವರೆದ ಚಿಕಿತ್ಸೆಗಾಗಿ ಎಷ್ಟು ಹಣ

ಖರ್ಚು ಆಗುತ್ತದೆ ಎನ್ನುವ ಕುರಿತಂತೆ ನಾನು ಯಾವುದೇ ಎಸ್ಟಿಮೇಷನ್ ಪತ್ರವನ್ನು ಕೊಟ್ಟಿರುವುದಿಲ್ಲ ಎಂದರೆ ಸರಿ. ಅರ್ಜಿದಾರರಿಗೆ ಸಹಾಯ ಮಾಡಲು ಸುಳ್ಳು ನ್ಯೂನತೆ ಪ್ರಮಾಣವನ್ನು ತೋರಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು).

ಓ ಹೇ ಕೇ ಸ ಇದೆ.

15 ನೇ ಅಪರ ನ್ಯಾಯಾಧೀಶರು
ಮತ್ತು ಎಂಎಸಿಟಿ